ಸೇವಾ ಪ್ರತಿಷ್ಠಾನಕ್ಕೆ ಮತ್ತಷ್ಟು ಕೆರೆ ಅಂಗಳಗಳತ್ತ ಹೆಜ್ಜೆ ಇಡಲು ಪ್ರೇರಣೆಯೂ ಆಯಿತು. ಹೀಗೆ ಈ ಐದು ವರ್ಷಗಳಲ್ಲಿ 10 ಕೆರೆಗಳು ಪುನರುಜ್ಜೀವನಗೊಂಡಿವೆ.

ಕೆರೆಗಳ ಪುನಶ್ಚೇತನವಷ್ಟೇ ಅಲ್ಲ ಅದನ್ನು ಆಕರ್ಷಣೆಯ ಕೇಂದ್ರವನ್ನಾಗಿ ಮಾಡುವುದು ಪ್ರತಿಷ್ಠಾನದ ಉದ್ದೇಶ. ಸಾರಗೊಂಡ್ಲು ಕೆರೆಯಲ್ಲಿ 40x40 ವಿಸ್ತೀರ್ಣದಲ್ಲಿ ಕೃತಕ ದ್ವೀಪ, ಸೊನಗಾನಹಳ್ಳಿ ಕೆರೆಯಲ್ಲಿ 30x30 ಅಳತೆ ವಿಸ್ತೀರ್ಣದ ದ್ವೀಪವನ್ನು ನಿರ್ಮಿಸಲಾಗಿದೆ.

## ಸಂಪನ್ಮೂಲ ಕ್ರೋಡೀಕರಣ

ಮೊದಲಿಗೆ ವರಪ್ರಸಾದ್ ರೆಡ್ಡಿ ಕೆರೆ ಪುನರುಜ್ಜೀವನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಕ್ಕೆ ತೆರಳಿ ಅಲ್ಲಿನ ಜನರ ಜೊತೆ ಮಾತುಕತೆ ನಡೆಸುವರು. ನಂತರ ಯುವ ಸಮುದಾಯಕ್ಕೆ ಜವಾಬ್ದಾರಿ ವಹಿಸುವರು. ಗ್ರಾಮಗಳ ಆರ್ಥಿಕ ಸ್ಥಿತಿವಂತರು, ಸರ್ಕಾರಿ ನೌಕರರು ಸೇರಿದಂತೆ ಜನಸಾಮಾನ್ಯರು ಈ ಕಾರ್ಯಕ್ಕೆ ಸಹಕರಿಸುತ್ತಿದ್ದಾರೆ. ಹುಂಡಿಯೊಂದನ್ನು ಗ್ರಾಮದ ಎಲ್ಲರ ಮನೆ ಬಾಗಿಲಿಗೆ ತೆಗೆದುಕೊಂಡು ಹೋಗಲಾಗುತ್ತದೆ. ಜನರು ತಮ್ಮ ಕೈಲಾದಷ್ಟು ದೇಣಿಗೆ ನೀಡಬಹುದು. ದಾನಿಗಳಿಂದ ಸಂಗ್ರಹವಾದ ಹಣವನ್ನು ಪ್ರತಿಷ್ಠಾನದ ಖಾತೆಯಲ್ಲಿರಿಸಿ ಹೊಳೆತ್ತಲು ಬಳಕೆ ಮಾಡಲಾಗುತ್ತದೆ. ಮಣ್ಣನ್ನು ಹೊತ್ತೊಯ್ಯಲು ರೈತರೇ ಟ್ರ್ಯಾಕ್ಟರ್ ತರುತ್ತಾರೆ. ತಮ್ಮ ಜಮೀನುಗಳಿಗೆ ಕೆರೆ ಮಣ್ಣನ್ನು ಕೊಂಡೊಯ್ಯುವವರು. ಪ್ರತಿ ಲೋಡ್ ಮಣ್ಣಿಗೆ ₹30 ಪ್ರತಿಷ್ಠಾನಕ್ಕೆ ನೀಡುತ್ತಾರೆ. ಈ ಹಣವೇ ಪ್ರಮುಖ ಸಂಪನ್ಮೂಲ.

‘ಕೆರೆಗಳ ಪುನರುಜ್ಜೀವನಕ್ಕೆ ಸರ್ಕಾರದಿಂದ ಯಾವುದೇ ಹಣ ಪಡೆದಿಲ್ಲ. ಗ್ರಾಮಸ್ಥರ ಸಹಕಾರವೇ ಮೂಲ. ನಾನು ಅಧಿಕಾರಿ ಆಗಿದ್ದೇನೆ. ಕೆಲವು ವಿಚಾರಗಳಲ್ಲಿ ಅನುಕೂಲ ಮತ್ತು ಅನನುಕೂಲಗಳೂ ಇರುತ್ತದೆ. ಆದ್ದರಿಂದ ಸೂಕ್ಷ್ಮವಾಗಿ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಾಗುತ್ತದೆ’ ಎನ್ನುತ್ತಾರೆ ವರಪ್ರಸಾದ್ ರೆಡ್ಡಿ.



ಕೆರೆ ಅಭಿವೃದ್ಧಿಗೆ ಹಳ್ಳಿ ಜನರ ಸಹಕಾರ

ಕೆರೆಗೆ ನೀರು ಹರಿದು ಬರುವ ಕಾಲುವೆಗಳು ಮುಚ್ಚಿದ್ದರೆ ಅಥವಾ ಒತ್ತುವರಿ ಆಗಿದ್ದರೆ ಅವುಗಳನ್ನು ತೆರವುಗೊಳಿಸಲಾಗುತ್ತದೆ. ಸಾಮಾನ್ಯವಾಗಿ ರಾಜಕಾಲುವೆಗಳ ಒತ್ತುವರಿ ಮತ್ತು ಮುಚ್ಚಿರುವ ಕಾರಣ ಕೆರೆಗಳಿಗೆ ನೀರು ಹರಿದುಬರುವುದಿಲ್ಲ. ಕಾಲುವೆ ಸ್ವಚ್ಛತೆಗೆ ಆದ್ಯತೆ ನೀಡಲಾಗುತ್ತಿದೆ. ಪುನರುಜ್ಜೀವನಗೊಂಡಿರುವ ಎಲ್ಲ ಕೆರೆಗಳಲ್ಲಿ ಕಿಲೋಮೀಟರ್‌ಗಟ್ಟಲೆ ರಾಜಕಾಲುವೆ ಸ್ವಚ್ಛವಾಗಿವೆ.

ಕಾರ್ಮಿಕರಿಗೆ ಸ್ಥಳೀಯರೇ ಊಟ ನೀಡುತ್ತಾರೆ. ಸಾಮಾನ್ಯವಾಗಿ ಡಿಸೆಂಬರ್‌ನಿಂದ ಏಪ್ರಿಲ್‌ವರೆಗೆ ಕೆಲಸಗಳು ನಡೆಯುತ್ತವೆ. ಒಂದು ಕೆರೆಯಿಂದ ಎಷ್ಟು ಪ್ರಮಾಣದಲ್ಲಿ ಮಣ್ಣು ತೆಗೆಯಲಾಗಿದೆ. ಇಂಗುಗುಂಡಿ ನಿರ್ಮಿಸಲಾಗಿದೆ– ಹೀಗೆ ಕಾಮಗಾರಿಯ ಸಮಗ್ರ ವಿವರಗಳನ್ನು ದಾಖಲಿಸಲಾಗುತ್ತದೆ. ಕೆಲಸಗಳು ಪೂರ್ಣಗೊಂಡ ನಂತರ ಗ್ರಾಮಸ್ಥರೆಲ್ಲ ಕೆರೆ ಅಂಗಳದಲ್ಲಿ ಸೇರಿ ‘ಕೆರೆ ಹಬ್ಬ’ ನಡೆಸಿ ಸಂಭ್ರಮಿಸುವರು.

‘ಒಂದೊಂದು ಕೆರೆಯ ಯಶಸ್ಸು ಮತ್ತೊಂದು ಕೆರೆಯ ಪುನರುಜ್ಜೀವನಕ್ಕೆ ಕಾರಣವಾಗುತ್ತಿದೆ. ಜನರು ಹುಮ್ಮಸ್ಸಿನಿಂದ ಕೈ ಜೋಡಿಸುತ್ತಿದ್ದಾರೆ. 76 ಎಕರೆಯ ಮುದುಗಾನಕುಂಟೆ ಕೆರೆಯನ್ನು ₹21 ಲಕ್ಷದಲ್ಲಿ ಪುನರುಜ್ಜೀವನಗೊಳಿಸಿದೆವು. ಇಲ್ಲಿ ದೊರೆತ ಯಶಸ್ಸು ಆತ್ಮವಿಶ್ವಾಸ ಹೆಚ್ಚಿಸಿತು’ ಎಂದು ಮೊದಲ ಕೆರೆ ಪುನರುಜ್ಜೀವನದ ಹೆಜ್ಜೆಗಳನ್ನು ನೆನಪಿಸಿಕೊಳ್ಳುವರು ವರಪ್ರಸಾದ್ ರೆಡ್ಡಿ.

‘ಗೌರಿಬಿದನೂರು ನನ್ನ ಸ್ವಂತ ತಾಲ್ಲೂಕು. ಬಹಳಷ್ಟು ಜನರಿಗೆ ನಮ್ಮೂರಿಗೆ ಏನಾದರೂ ಮಾಡಬೇಕು ಎನ್ನುವ ಹಂಬಲ, ಆಸೆ ಇರುತ್ತದೆ. ಆ ಫಲವೇ ಕೆರೆಗಳ ಮರುಹುಟ್ಟು. ಕೆರೆಗಳು ಸಮುದಾಯಕ್ಕೆ ಸೇರಿದ ಸ್ವತ್ತುಗಳು. ವೈಯಕ್ತಿಕ ಸ್ವತ್ತುಗಳಲ್ಲ. ನಮ್ಮ ಕೆರೆ ನಮ್ಮ ಜವಾಬ್ದಾರಿ ಎನ್ನುವ ಅರಿವು ಜನರಿಗೆ ಬಂದರೆ ಯಾವ ರೀತಿ ಬದಲಾವಣೆ ಸಾಧ್ಯ ಎನ್ನುವುದಕ್ಕೆ ಪುನರುಜ್ಜೀವನವೇ ಸಾಕ್ಷಿ. ಬಯಲುಸೀಮೆಯ ನಮ್ಮ ಜನರಿಗೆ ನೀರಿನ ಬಗ್ಗೆ ಭಾವನಾತ್ಮಕ ಬೆಸುಗೆ ಇದೆ’ ಎನ್ನುತ್ತಾರೆ.

‘ಸಮುದಾಯಕ್ಕೆ ನಾಯಕತ್ವ ನೀಡಿದರೆ ಖಂಡಿತ ಇಂತಹ ಕೆಲಸಗಳು ಯಶಸ್ಸಾಗುತ್ತವೆ. ‘ನಮ್ಮ ಕೆರೆ ನಮ್ಮ ಜವಾಬ್ದಾರಿ’ ಎನ್ನುವುದು ಜನರಿಗೆ ಬಂದಿದೆ. ಜನರು ಐದು, ಹತ್ತು ರೂಪಾಯಿಯಿಂದ ಹಿಡಿದು ₹20 ಸಾವಿರ, ₹50 ಸಾವಿರ ನೀಡಿದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲೆಯ ಕೆರೆಗಳಲ್ಲಿ ಮಳೆ ನೀರನ್ನು ಹಿಡಿದಿಟ್ಟುಕೊಂಡರೆ ಯಾವುದೇ ನೀರಾವರಿ ಯೋಜನೆಗಳೇ ಅಗತ್ಯವಿಲ್ಲ. ನಮ್ಮ ಪರಿಸರದಲ್ಲಿಯೂ ಬದಲಾವಣೆ ಸಾಧ್ಯ’ ಎಂದು ತಮ್ಮ ಅನುಭವದ ಮಾತುಗಳನ್ನಾಡುತ್ತಾರೆ.

11ನೇ ಕೆರೆಯಾಗಿ ದ್ಯಾವಸಂದ್ರ ಗ್ರಾಮದ ಕೆರೆಯನ್ನು ನವೀಕರಣಗೊಳಿಸಲು ಚರ್ಚೆಗಳು ನಡೆದಿವೆ. ದ್ಯಾವಸಂದ್ರದ ಕೆರೆ ಅಂಗಳಲ್ಲಿಯೇ ಗ್ರಾಮಸ್ಥರ ಜೊತೆ ಸಭೆ ನಡೆಸಿರುವ ವರಪ್ರಸಾದ್ ರೆಡ್ಡಿ, ಯಾವ ಕೆಲಸಗಳು ಆಗಬೇಕಿವೆ, ಗ್ರಾಮಸ್ಥರ ಸಹಕಾರವೇನು, ಎಷ್ಟು ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎನ್ನುವ ಬಗ್ಗೆ ಚರ್ಚಿಸಿ ರೂಪುರೇಷೆ ಸಿದ್ಧಗೊಳಿಸಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in



ಅಪಾರ ಮಳೆಯಿಂದ ಮುದುಗಾನಕುಂಟೆ ಕೆರೆ ಮೈದುಂಬಿದ್ದ ಕ್ಷಣ